only in Bangalore but also in mofussil towns. Will you kindly consider the necessity of requesting the Government of India to liberalise the import licences so far as food manufacturing units are concerned and get them either from Japan or Germany and allot the necessary foreign exchange which is in the very nature of it too small ? Will wou kindly examine when such requests are forthcoming ?

ಶ್ರೀ ಎ. ಪಿ. ಅಪ್ಪಣ್ಣ.—ಬ್ರೆಡ್ ತಯಾರು ಮಾಡುವಂಥ ಮೇಷೀನುಗಳನ್ನು ತರುವ ವಿಚಾರದಲ್ಲಿ ಕೇಂದ್ರ ಸರಕಾರ, ಸ್ಮಾರ್ ಸ್ಕೇಲ್ ಇಂಡ್ರಸ್ಟ್ರೀಸ್ ಕಾರ್ಪೋರೇಷನ್ ರುಪಿ ಕ್ರೆಡಿಟ್, ಎನ್ ಕ್ರೆಡಿಟ್, ಡಚ್ ಕ್ರೆಡಿಟ್ ಮುಂತಾದ ಕ್ರೆಡಿಟ್ಟುಗಳನ್ನು ಕೋಟಗಟ್ಟರೆ ಕೊಟ್ಟಿದ್ದಾರೆ. ಇದರ ಪ್ರಕಾರ ಯಾವುದಾದರೂ ಕ್ರೆಡಿಟ್ ಫೆಸಿಲಿಟಿ ಬೇಕಾದರೆ ಸುಲಭವಾಗಿ ತೆಗೆದುಕೊಳ್ಳಬಹುದು. ನಾವು ಶಿಪಾರ್ಸು ಮಾಡಬಹುದು. ಬೇರೆ ಕಡೆಯಿಂದ ತರುವುದಾದರೆ ನಾವು ಶಿಪಾರ್ಸು ಮಾಡುತ್ತೇವೆ. ಆದರೆ ಇಂಡಿಯಾ ಸರಕಾರದವರು ಅದನ್ನು ಒಪ್ಪುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಎನ್ ಕ್ರೆಡಿಟ್ ಅಥವಾ ರುಪಿ ಕ್ರೆಡಿಟ್ ಸೌಲಭ್ಯ ಉಪಯೋಗಿಸಿಕೊಂಡು ಮೆಷೀನರಿ ತರುವುದಾದರೆ ನಾವು ಅದಕ್ಕೆ ಪ್ರೋತ್ಸಾಹ ಕೊಡುತ್ತೇವೆ.

Area Development Scheme in Raichur

465. Sri K. SANGAN GOWDA (Lingsugur).—

Will the Minister for Development and Co-operation be pleased to state:—

(*a*) whether the Government has received any representation from the D.D.C., Raichur regarding Area-Development Scheme in Raichur District;

(*b*) if so, the steps taken by them ?

A.—Sri P. M. NADGOUDA (Minister for Development and Co-operation).—

(*a*) No.

(*b*) Does not arise.

ಶ್ರೀ ಕೆ. ಸಂಗನಗೌಡ.—ರಾಯಚೂರು ಜಿಲ್ಲೆಯ ಲಿಂಗಸೂಗೂರು, ಕುಷ್ಟಗಿ, ಯಲ್ಬುರ್ಗ ಗಳಿಗೆ ಯಾವುದೇ ನೀರಾವರಿ ಸೌಕರ್ಯ ಸಿಕ್ಕುವುದಿಲ್ಲ, ಈ ಪ್ರದೇಶದ ಅಭಿವೃದ್ಧಿಯ ದೃಷ್ಟಿಯಿಂದ ಏರಿಯಾ ಡೆವಲಪ್‌ಮೆಂಟ್ ಸ್ಕೀಂ ಬಗ್ಗೆ 11-1-68 ರಂದು ನಡೆದ ಜಿಲ್ಲಾಭಿವೃದ್ಧಿ ಮಂಡಲಯಲ್ಲಿ ಒಮ್ಮತದಿಂದ ನಿರ್ಣಯ ತೆಗೆದುಕೊಂಡಿದ್ದರೂ ಕೂಡ ಮತ್ತು 3 ತಿಂಗಳಾದರೂ ಇನ್ನೂ ಆ ಮನವಿ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದರೆ ಬಹಳ ವಿಳಂಬವಾಗಿದೆ ಅದಕ್ಕೆ ಕಾರಣವೇನು ಎಂಬುದನ್ನು ತಿಳಿಸಬೇಕು ಮತ್ತು ಒಂದು ವೇಳೆ ಅಂತಹ ಮನವಿ ಸರ್ಕಾರದ ಗಮನಕ್ಕೆ ಬಂದರೆ ಅದನ್ನು ಜಾರಿಗೆ ತರುವ ಭರವಸೆಯನ್ನು ತಾವು ಕೊಡುತ್ತೀರಾ ?

† ಶ್ರೀ ಪಿ. ಎಂ. ನಾಡಗೌಡ.—ರಾಯಚೂರು ಅಭಿವೃದ್ಧಿ ಮಂಡಳಿ 11-1-68 ಕ್ಕೆ ಆ 3 ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ಠರಾವು ಮಾಡಿದ್ದು ಖರೆ ಅದೆ. ಅದು ಜಿಲ್ಲಾಧಿಕಾರಿಗಳಿಂದ ಡಿವಿಜನರ್ ಕಮಿಷನರಿಗೆ ಬಂದಿಲ್ಲ. ಸರ್ಕಾರದವರು ಡಿವಿಜನರ್ ಕಮಿಷನರು ಮತ್ತು ಜಿಲ್ಲಾಧಿಕಾರಿಗಳಿಗೆ ಬರೆದು ಆ ಒಂದು ಪ್ಯಾಕೆಜ್‌ನ್ನು ತಯಾರು ಮಾಡಿ ಅವರು ಕಳುಹಿಸಬೇಕು. ಸರ್ಕಾರದವರು ಅಗ್ರಿಕಲ್ಚರಲ್ ರೀ ಫೈನಾನ್ಸ್ ಕಾರ್ಪೊರೇಷನ್‌ವಕರಿಗೆ ಬರೆದು ಅದನ್ನು ಪರಿಶೀಲನೆ ಮಾಡಲಿಕ್ಕೆ ಸರ್ಕಾರ ಸಿದ್ಧವಿದೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತಾ ಇದ್ದೇನೆ.